ಓ ಎಸ್ ನಂ: 56/2019
ಪಿ. ಡಬ್ಲ್ಯೂ-1

**(ಇಂದು ದಿನಾಂಕ 05-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀಸವಾಲು: ಪ್ರತಿವಾದಿ ನಂ: 35 ರಿಂದ 39 ರವರ ಪರ ಶ್ರೀ ಕೆ ಎಲ್ ಪಿ ವಕೀಲರಿಂದ**

1 ನೇ ವಾದಿ ನನ್ನ ತಾಯಿಯ ತಂಗಿ ಎಂದರೆ ಸರಿ . 2 ನೇ ವಾದಿ ನನ್ನ ತಾಯಿ ಎಂದರೆ ಸರಿ . ನನ್ನ ತಾಯಿಯ ಹೆಸರು ಮದುವೆಯ ನಂತರ ಇಮಾಂಬಿ ಲಾಲಸಾಬ ಬೆಣಚಿ ಎಂದು ಆಗಿರುತ್ತದೆ ಎಂದರೆ ಸರಿ . 1 ನೇ ವಾದಿಯ ಹೆಸರು ಮದುವೆಯ ನಂತರ ಅಮಿನಾಬಿ ಶೌಕತ್ ಅಲಿ ಲಂಗಡಿ ಎಂದು ಆಗಿರುತ್ತದೆ . ನನ್ನ ತಾಯಿಯ ಮದುವೆ 1960 ರಲ್ಲಿ ಆಗಿರಬಹುದು . 1 ನೇ ವಾದಿಯ ಮದುವೆ 1980 ರಲ್ಲಿ ಆಗಿರಬಹುದು . ವಾದಿ ನಂ: 1 ಮತ್ತು 2 ರವರ ವಯಸ್ಸಿನ ಅಂತರ 9 ವರ್ಷ ಇರಬಹುದು .

1980 ರಲ್ಲಿ ಕರ್ನಾಟಕ ಭೂ ಸುಧಾರಣಾ ಕಾಯ್ದೆ ಅನ್ವಯ ನನ್ನ ಅಜ್ಜ (ನನ್ನ ತಾಯಿಯ ತಂದೆ ) ಹಸನಸಾಬ ಇವರ ಹೆಸರಿಗೆ ಮಂಜೂರಾಗಿತ್ತು . ಹಸನಸಾಬ ಇವರಿಗೆ ಮಂಜೂರಾದ ಜಮೀನು ಅಲ್ಲದೇ ಇನ್ನೂ 15 ಎಕರೆ ಆಸ್ತಿಗಳು ಸಿಂಗನಹಳ್ಳಿ ಗ್ರಾಮದಲ್ಲಿ ಇದೆ . ಸದರಿ 15 ಎಕರೆ ಆಸ್ತಿಗಳ ಸರ್ವೆ ನಂಬರ , ಕ್ಷೇತ್ರ ಗೊತ್ತಿಲ್ಲ . 15 ಎಕರೆ ಜಮೀನು ಈಗಲೂ ನನ್ನ ಅಜ್ಜನ ಹೆಸರಿನಲ್ಲಿಯೇ ಇವೆ . ನನ್ನ ಅಜ್ಜ ಮರಣ ಹೊಂದಿ 40 ವರ್ಷ ಕಳೆದಿರಬಹುದು ಆದರೆ ಇಸ್ವಿ ಗೊತ್ತಿಲ್ಲ . ನನ್ನ ಅಜ್ಜನ ಮರಣದ ತರುವಾಯ ಕೆಲವು ಆಸ್ತಿಗಳನ್ನು ಮಾತ್ರ ವಾರಸಾ ಪ್ರಕಾರ ಖಾತೆ ಮಾಡಿಸಿಕೊಂಡಿದ್ದೆವೆ . ದಾವಾ ಆಸ್ತಿಗಳನ್ನು ನನ್ನ ಅಜ್ಜನ ಮರಣದ ತರುವಾಯ = ವಾರಸಾ ಮಾಡಿಸಿಕೊಂಡಿದ್ದೆವೆ . ಅದರನ್ವಯ ವಾರಸಾ ಮಾಡಿಕೊಂಡವರ ಹೆಸರು ಉತಾರಗಳಲ್ಲಿ ನಮೂದಾಯಿತು ಎಂದರೆ ಸರಿ . ನಿಪಿ-14 ರನ್ವಯ ನನ್ನ ಅಜ್ಜ ದಿ: 03.01.1982 ರಲ್ಲಿ ಮರಣ ಹೊಂದಿರುವುದಾಗಿ ವರದಿ ಮಾಡಿ ಆ ಪ್ರಕಾರ ಅರ್ಜಿಯಲ್ಲಿ ಉಲ್ಲೇಖಿಸಿದ ವ್ಯಕ್ತಿಗಳ ಹೆಸರಿಗೆ ಖಾತೆ ಮಾಡಲು ಕೋರಿಕೊಂಡಿದ್ದೆವು ಎಂದರೆ ಸರಿ . ಹಸನಸಾಬ ಇವರ ಮಗ ಮಕ್ತುಂಸಾಬ ಇವರು ದಿ: 14.09.1989 ರಂದು ಮರಣ

ಹೊಂದಿರುವುದಾಗಿ ಉಲ್ಲೇಖಿಸಿ ಅವರ ವಾರಸುದಾರರ ಹೆಸರಿಗೆ ನಿಪಿ-15 ರನ್ವಯ ಖಾತೆಯಾಗಿರುತ್ತದೆ ಎಂದರೆ ಸರಿ . ನಿಪಿ-14 ಮತ್ತು 15 ರಲ್ಲಿ ಉಲ್ಲೇಖಿಸಿರುವ ವ್ಯಕ್ತಿಗಳು ಮಾತ್ರ ವಾರಸುದಾರರು ದಾವಾ ಸ್ವತ್ತುಗಳ ಮಾಲೀಕರು ಎಂದು ಉಲ್ಲೇಖಿಸಿ ಖಾತೆಯಾಗಿದೆ ಎಂದರೆ ಸರಿ . ನಿಪಿ-16 ರಲ್ಲಿ ಉಲ್ಲೇಖಿಸಿರುವ ಪ್ರಕಾರ ತಹಶಿಲ್ದಾರವರಿಗೆ ನಿಪಿ-14 ಮತ್ತು 15 ರಲ್ಲಿ ಉಲ್ಲೇಖಿಸಿರುವ ವಾರಸುದಾರರು ಅರ್ಜಿ ಸಲ್ಲಿಸಿ ಸರ್ಕಾರ ವಿಧಿಸಿರುವ 15 ವರ್ಷಗಳ ಪರಭಾರೆ ಮಾಡಬಾರದು ಎನ್ನುವ ಷರತ್ತನ್ನು ತೆಗೆಯಬೇಕು ಎಂದು ಕೊರಿಕೊಂಡ ಮೇರೆಗೆ ಆ ಪ್ರಕಾರ ಷರತ್ತನ್ನು ತೆಗೆಯಲಾಯಿತು ಎಂದರೆ ಸರಿ . 1999 ರಲ್ಲಿ ಉತಾರಿನಲ್ಲಿ ಕಂಡು ಬರುವ ವ್ಯಕ್ತಿಗಳು ಪ್ರತಿವಾದಿ ನಂಃ 34 ರವರ ಹೆಸರಿಗೆ ನೊಂದು ಖರೀದಿ ಪತ್ರ ಮಾಡಿಕೊಟ್ಟಿದ್ದರು ಎಂದರೆ ಸರಿ . ಸದರಿ ಖರೀದಿ ಪತ್ರಗಳ ದೃಡೀಕೃತ ನಕಲುಗಳನ್ನು ಹಾಜರುಪಡಿಸಿ ನನ್ನ ಪರವಾಗಿ ನಿಶಾನೆಗಳು ಎಂದು ಗುರುತಿಸಿಕೊಂಡಿದ್ದೇನೆ ಎಂದರೆ ಸರಿ . ಖರೀದಿ ಪತ್ರದನ್ವಯ ಮಾರಾಟ ಮಾಡಿದವರ ಹೆಸರನ್ನು ತೆಗೆದು ಖರೀದಿ ಮಾಡಿದ ಪ್ರತಿವಾದಿ 34 ರವರ ಹೆಸರಿಗೆ ಖಾತೆಯಾಯಿತು ಎಂದರೆ ಸರಿ . ಖರೀದಿ ಮಾಡಿದ ಪ್ರಕಾರ 34 ನೇ ಪ್ರತಿವಾದಿ ಮತ್ತು ಅವರ ಮರಣದ ತರುವಾಯ ಪ್ರತಿವಾದಿ 35 ರಿಂದ 39 ರವರು ಖರೀದಿ ಮಾಡಿದ ಸ್ವತ್ತುಗಳ ಕಬ್ಜಾ ವಹಿವಾಟು ಹೊಂದಿದ್ದಾರೆ ಎಂದರೆ ಸರಿ . ನಿಪಿ-14 ರಿಂದ 16 ನ್ನು ನಾವು ಪ್ರಶ್ನೆ ಮಾಡಿಲ್ಲ . ಪ್ರತಿವಾದಿ 34 ರವರು 1999 ರಲ್ಲಿ ತಾವು ಖರೀದಿ ಮಾಡಿದ ಸ್ವತ್ತುಗಳ ಮಾಲೀಕರು ಯಾರು ಎಂಬುವುದನ್ನು ಖಚಿತಪಡಿಸಿಕೊಂಡು ಖರೀದಿ ಬಾಬ್ತು ಹಣ ಪಾವತಿಸಿ ಖರೀದಿ ಮಾಡಿದ್ದಾರೆ ಎಂದರೆ ಸರಿ .

ನಿಪಿ-7 ನ್ನು ಯಾರು ಅರ್ಜಿ ಕೊಟ್ಟು ಯಾವ ವರ್ಷದಲ್ಲಿ ಪಡೆದಿದ್ದಾರೆ ಎನ್ನುವ ಮಾಹಿತಿ ಇಲ್ಲ . ನಿಪಿ-7 ಸರಿಯಾದ ಮಾಹಿತಿಯನ್ನು ಒಳಗೊಂಡಿಲ್ಲ ಅದು ತಪ್ಪು ಇದೆ ಎಂದರೆ ಸರಿಯಲ್ಲ .

ನನ್ನ ಅಜ್ಜ ಹಸನಸಾಬ ಇವರಿಗೆ ಒಟ್ಟು 09 ಜನ ಮಕ್ಕಳು ಅವರ ಪೈಕಿ ವಾದಿ ನಂಃ 1

ಮತ್ತು 2 ರವರು ಹಸನಸಾಬ ಇವರ ಹೆಣ್ಣು ಮಕ್ಕಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಕೆಲವು ಪ್ರತಿವಾದಿಯರು ದಾವಾ ಸ್ವತ್ತುಗಳನ್ನು ತಪ್ಪಾಗಿ ಸದರಿ ಆಸ್ತಿಗಳ ದಾಖಲೆಗಳಲ್ಲಿ ನಮೂದಿಸಿಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನನ್ನ ಅಜ್ಜ ಹಸನಸಾಬ ಇವರ ಮರಣದ ನಂತರ ನಾವುಗಳು ಹಸನಸಾಬ ಇವರ ವಾರಸುದಾರರಾಗಿ ದಾವಾ ಸ್ವತ್ತುಗಳ ಸಾಮೂಹಿಕ ಕಬ್ಜಾ ವಹಿವಾಟು ಹೊಂದಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ನಾವು ಕಬ್ಜಾದಲ್ಲಿ ಇಲ್ಲ ಎಂದು ಹೇಳುತ್ತಾರೆ . ನನ್ನ ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರದಲ್ಲಿ ಉಲ್ಲೇಖಿಸಿರುವ ವ್ಯಾಜ್ಯ ಕಾರಣ ಉಂಟಾದ ದಿನಾಂಕ ಸುಳ್ಳು ಇದೆ ಎಂದರೆ ಸರಿಯಲ್ಲ . ದಾವಾ ಆಸ್ತಿಗಳಲ್ಲಿ 1 ನೇ ವಾದಿ ಅಥವಾ 2 ನೇ ವಾದಿ ಮಕ್ಕಳಾದ ನಮಗೆ ಕಾಯ್ದೆ ಶಿರ ಹಕ್ಕು ಇಲ್ಲ ಎಂದರೆ ಸರಿಯಲ್ಲ . ದಾವಾ ಸ್ವತ್ತುಗಳ ಮೌಲ್ಯ ಹೆಚ್ಚಾಗಿರುವ ಕಾರಣ ಖರೀದಿ ಮಾಡಿರುವ ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಹಸನಸಾಬ ರವರ ಕುಟುಂಬಕ್ಕೆ ಸೇರಿದ ಇತರೇ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸದೇ ಖರೀದಿ ಮಾಡಿದ ಪ್ರತಿವಾದಿಯರಿಗೆ ತೊಂದರೆ ಕೊಡಲು ದಾವಾ ಸ್ವತ್ತುಗಳ ಕುರಿತು ದಾವೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.